



**ಮಂಜಿನ ಶಿವಾಲಯಕ್ಕೆ...**

ರೈನರ್ ಮರಿಯಾ ರಿಲ್ಕನ
ಕೆಲವು ಕವಿತೆಗಳು
ಕನ್ನಡಕ್ಕೆ: ಎಚ್.ಎಸ್.
ರಾಘವೇಂದ್ರ ರಾವ್
ಪು:196 ಬೆ: ₹ 220
ಪ್ರ: ಪಲ್ಲವ ಪ್ರಕಾಶನ,
ಚನ್ನಪಟ್ಟಣ ಅಂಚೆ,
ವಯಾ ಎಮ್ಮಿಗನೂರ,
ಬಳ್ಳಾರಿ – 583 113
ದೂರವಾಣಿ: 94803 53507

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ತುಯ್ಯುತ್ತಿರುತ್ತವೆ ಎನ್ನುತ್ತಾರೆ ವಿಮರ್ಶಕರು. ಈ ಮಾತಿಗೆ ಇಹ ಮತ್ತು ಪರದ ನಡುವೆಯೂ, ದೇಹದ ಮತ್ತು ದೇಹವಿಹೀನದ ನಡುವೆಯೂ, ದೃಶ್ಯ ಮತ್ತು ಅದೃಶ್ಯದ ನಡುವೆಯೂ ಬಂದು ಹೋಗು ಮಾಡುವ ಕವಿತೆಗಳು ಇವು ಎಂದು ಸೇರಿಸಬಹುದು.

ಹೀಗಾಗಿ, ಅಮೂರ್ತ ಮತ್ತು ಅನೂಹ್ಯ ಜಗತ್ತಿನ ಕುರಿತು ಬರೆದೂ, ಬಹುಶಃ ಅದೇ ಕಾರಣಕ್ಕೆ ಇವತ್ತಿಗೂ ಅವನು ಮತ್ತೆ ಮತ್ತೆ ಅನುವಾದಿಸಲ್ಪಡುತ್ತಲೇ ಇದ್ದಾನೆ ಎನ್ನುವುದರಲ್ಲೇ ರಿಲ್ಕನ ಆಧುನಿಕತೆಯೂ ಇರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕನ್ನಡದ ಮಟ್ಟಿಗೆ ನಾವು ಸ್ವಲ್ಪ ಅದೃಷ್ಟವಂತರೆಂದೇ ಹೇಳಬೇಕು. ಈಗಾಗಲೇ ಲೇಖಕರಾದ ಕೆ.ವಿ. ತಿರುಮಲೇಶ್, ಓಎಲ್ಲೆನ್, ಯು.ಆರ್. ಅನಂತಮೂರ್ತಿ, ಎಸ್. ಮಂಜುನಾಥ್, ಅಬ್ದುಲ್ ರಶೀದ್ ರಿಲ್ಕನ ಗದ್ಯ ಅಥವಾ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಜಗತ್ತಿನಾದ್ಯಂತ ಕೂಡ ರಿಲ್ಕ ಮತ್ತೆ ಮತ್ತೆ ಅನುವಾದಗೊಳ್ಳುತ್ತಲೇ ಇದ್ದಾನೆ. ಆದಿ ಶಂಕರರ ಅದ್ವೈತವನ್ನೂ, ನಾರಾಯಣಗುರುಗಳ ಸಮಬಾಳು ಸಮಪಾಲು ತತ್ತ್ವವನ್ನೂ, ಪರಮಹಂಸರ ಭಕ್ತ–ದೈವ ಸಂಬಂಧವನ್ನೂ ರಿಲ್ಕನ ಕವಿತೆಗಳಲ್ಲಿ ಅರಸುವ ಯು.ಆರ್. ಅನಂತಮೂರ್ತಿಯವರು ಶಂಕರರು ಮುಖಾಮುಖಿಯಾದ ಚಾಂಡಾಲನ ಕತೆಗೆ ನಾರಾಯಣ ಗುರುಗಳು ಕೊಟ್ಟ ವ್ಯಾಖ್ಯಾನದ ಬಗ್ಗೆ ತಮ್ಮ ಗೆಳೆಯ ಇಸ್ಮಾಯಿಲ್‌ರಿಂದ ತಿಳಿದುಕೊಂಡು ಅದನ್ನು ರಿಲ್ಕನಿಗೆ ಕನೆಕ್ಟ್ ಮಾಡುತ್ತಾರೆ!

ಮೂಲತಃ ಜರ್ಮನ್ ಭಾಷೆಯಲ್ಲಿ ಬರೆದ ರಿಲ್ಕ ಇಂಗ್ಲಿಷಿಗೆ ಬಂದು ಕನ್ನಡಕ್ಕೆ ಬರಬೇಕು. ಈ ನೆಲೆಯಲ್ಲೇ ಅನಂತಮೂರ್ತಿಯವರು ನಮಗೆ ದಕ್ಕಬಹುದಾದ ರಿಲ್ಕೆಯ ಕುರಿತು ಸದಾ ಉಳಿದು ಬಿಡುವ ಒಂದು ಭಾಷೆಯ ಮಿತಿ ಅನುವಾದಕನಲ್ಲಿ ಮೂಡಿಸುವ ವಿನಯದ ಬಗ್ಗೆ ಮತ್ತು ಅದರ ಅಗತ್ಯದ ಬಗ್ಗೆ ಹೇಳುತ್ತಾರೆ. ಎಚ್ಚೆಸ್ವಾರ್ ಅವರು